ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 28-11-1997.

# *ಬೇಹದ್ ಸೇವೆಯ ಸಾಧನೆ- ಆತ್ಮಿಕ ವ್ಯಕ್ತಿತ್ವದ ಮೂಲಕ ದೃಷ್ಟಿಯಿಂದ ನಿಹಾಲ್(ಅದ್ಭುತ,ತೃಪ್ತ) ಮಾಡಬೇಕು.*

(बेहद की सेवा का साधन - रूहानी पर्सनालिटी द्वारा नज़र से निहाल करना)

ಇಂದು ಬಾಪ್‌ದಾದಾ ಅನೇಕ ಕಲ್ಪಗಳಿಂದ ಮಿಲನ ಮಾಡುತ್ತಿರುವ ಮುದ್ದಾದ, ಪ್ರೀತಿಯ ಮಕ್ಕಳನ್ನು ಮತ್ತೆ ಭೇಟಿಯಾಗಲು ಬಂದಿದ್ದಾರೆ. ಅವ್ಯಕ್ತ ಮಿಲನವಂತೂ ಸದಾ ಮಾಡುತ್ತಲೇ ಇರುತ್ತೀರಿ. ಆದರೆ ಅವ್ಯಕ್ತದಿಂದ ವ್ಯಕ್ತದಲ್ಲಿ ಭೇಟಿಯಾಗಲು ಭಾರತ ದೇಶದಿಂದ, ವಿದೇಶಗಳಿಂದ ಮಕ್ಕಳೆಲ್ಲರೂ ತಮ್ಮ ಮನೆಗೆ ಮತ್ತೆ ತಲುಪಿದ್ದಾರೆ. ಬಾಪ್‌ದಾದಾ ನೋಡುತ್ತಿದ್ದಾರೆ ನಾಲ್ಕೂ ಕಡೆ ಇರುವ ಮಕ್ಕಳು ತಮ್ಮ ತಮ್ಮ ಸ್ಥಾನಗಳಲ್ಲಿ ಕೂಡಾ ಮಿಲನವನ್ನಾಚರಿಸುತ್ತಿದ್ದಾರೆ. ಈ ಮಿಲನ ಆತ್ಮಿಕ ಅಲೌಕಿಕ ಮಿಲನ. ಈ ಮಿಲನ ಬಾಪ್‌ದಾದಾ ಮತ್ತು ಮಕ್ಕಳ ಸ್ನೇಹಕ್ಕೆ ಸಾಕಾರ ಸ್ವರೂಪ.

ಇಂದು ಬಾಪ್‌ದಾದಾ ತನ್ನ ಮಕ್ಕಳ ಆತ್ಮಿಕ ವ್ಯಕ್ತಿತ್ವವನ್ನು ನೋಡುತ್ತಿದ್ದಾರೆ. ಪ್ರತಿಯೊಂದು ಮಗುವಿನ ಆತ್ಮಿಕ ವ್ಯಕ್ತಿತ್ವ ಎಷ್ಟು ಶ್ರೇಷ್ಠವಾದದ್ದು! ಈ ವಿಧವಾದ ಆತ್ಮಿಕ ವ್ಯಕ್ತಿತ್ವ ಕಲ್ಪವಿಡೀ ಯಾರಿಗೂ ಇರುವುದಿಲ್ಲ. ಏಕೆಂದರೆ ನಿಮ್ಮೆಲ್ಲರ ವ್ಯಕ್ತಿತ್ವವನ್ನು ತಯಾರು ಮಾಡುವವರು ಶ್ರೇಷ್ಠಾತಿ ಶ್ರೇಷ್ಠವಾದ ತಂದೆಯಾಗಿದ್ದಾರೆ. ನಿಮ್ಮ ಆತ್ಮಿಕ ವ್ಯಕ್ತಿತ್ವದ ಬಗ್ಗೆ ನಿಮಗೆ ಕೂಡ ತಿಳಿದಿದೆಯಲ್ಲವೇ, ಎಲ್ಲದಕ್ಕಿಂತಲೂ ಶ್ರೇಷ್ಠಾತಿಶ್ರೇಷ್ಠ ವ್ಯಕ್ತಿತ್ವ- ಸ್ವಪ್ನ ಮತ್ತು ಸಂಕಲ್ಪದಲ್ಲಿ ಕೂಡ ಸಂಪೂರ್ಣ ಪವಿತ್ರತೆ. ನಿಮ್ಮಲ್ಲಿ ಕೂಡ ನಂಬರ್‌ವಾರ್ ಆಗಿದ್ದಾರೆ. ಆದರೆ ವಿಶ್ವದಲ್ಲಿರುವ ಸರ್ವಾತ್ಮರಿಗಿಂತ ಶ್ರೇಷ್ಠವಾದವರು. ಬಾಪ್‌ದಾದಾ ಪ್ರತಿಯೊಬ್ಬರ ಮಸ್ತಕದಲ್ಲಿ ವ್ಯಕ್ತಿತ್ವದ ಹೊಳಪನ್ನು ನೋಡುತ್ತಿದ್ದಾರೆ. ಪವಿತ್ರತೆಯ ಜೊತೆ ಜೊತೆಗೆ ಎಲ್ಲರ ಮುಖ ಮತ್ತು ನಡವಳಿಕೆಯಲ್ಲಿ ಆತ್ಮೀಯತೆಯ ವ್ಯಕ್ತಿತ್ವ ಇರಬೇಕು. ಇನ್ನೊಂದು ವ್ಯಕ್ತಿತ್ವ ಯಾವುದು? ಸರ್ವ ಖಜಾನೆಗಳಿಂದ ಸಂಪನ್ನವಾಗಿರುವವರಿಗೆ ಕೂಡ ವ್ಯಕ್ತಿತ್ವ ಇರುತ್ತದೆ. ಯಾರು ಎಷ್ಟು ಸಂಪನ್ನ ಆತ್ಮರಾದರೂ ನಿಮ್ಮ ಮುಂದೆ ಆ ಸಂಪನ್ನ ಆತ್ಮರು ಕೂಡ ಶ್ರೇಷ್ಠವಲ್ಲ. ಏಕೆಂದರೆ ಅವರು ಸಹ ಅವಿನನಾಶಿ ಸುಖ, ಶಾಂತಿಗಳ ಖಜಾನೆಗಳಿಂದ ಖಾಲಿಯಾಗಿದ್ದಾರೆ. ನಿಮ್ಮ ಹತ್ತಿರ ಯಾವ ಸಂಪತ್ತಿ ಇದೆಯೋ ಅದರ ಮುಂದೆ ಎಷ್ಟು ಕೋಟ್ಯಾಧಿಪತಿಗಳಾದರೂ ತಂದೆಯಿಂದ ಸುಖ, ಶಾಂತಿಯನ್ನು ಕೇಳುವವರು ಆದರೆ ನೀವು ಸದಾ ಅವಿನಾಶಿ ಖಜಾನೆಗಳೊಂದಿಗೆ ಸಂಪನ್ನರು. ಆ ಖಜಾನೆ ಇಂದು ಇರುತ್ತದೆ ನಾಳೆ ಇರುವುದಿಲ್ಲ ಆದರೆ ನಿಮ್ಮ ಖಜಾನೆಗಳನ್ನು ಯಾರು ಕಳ್ಳತನ ಮಾಡಲಾಗುವುದಿಲ್ಲ ಯಾರು ಅಲುಗಾಡಿಸಲಾಗುವುದಿಲ್ಲ. ಅಕ್ಷಯ ಮತ್ತು ಅಖಂಡ ಖಜಾನೆ. ನೀವು ಇಂತಹ ವ್ಯಕ್ತಿತ್ವವಿರುವ ಮಕ್ಕಳು. ಪ್ರಪಂಚದಲ್ಲಿ ಅಂತೂ ಎಲ್ಲರಿಗಿಂತಲೂ ಶ್ರೇಷ್ಠವಾದ ವ್ಯಕ್ತಿತ್ವವಿರುವವರು ಕೂಡ ಆತ್ಮರಿಂದ, ವಿನಾಶಿ ಧನದಿಂದ, ವಿನಾಶಿ ವೃತ್ತಿಯಿಂದ, ವ್ಯಕ್ತಿತ್ವವನ್ನು ತಯಾರು ಮಾಡಿಕೊಳ್ಳುತ್ತಾರೆ ಅಥವಾ ಕರೆಯಲ್ಪಡುತ್ತಾರೆ ಆದರೆ ನಿಮ್ಮನ್ನು ಶ್ರೇಷ್ಠಾತಿ ಶ್ರೇಷ್ಠ ಪರಮಾತ್ಮನು

ಶ್ರೇಷ್ಠ ವ್ಯಕ್ತಿತ್ವವುಳ್ಳವರನ್ನಾಗಿ ತಯಾರು ಮಾಡಿದ್ದಾರೆ. ಆದ್ದರಿಂದ ನಿಮ್ಮ ಉನ್ನತವಾದ ವ್ಯಕ್ತಿತ್ವದ ಆತ್ಮಿಕ ನಶೆ ಇರುತ್ತದೆಯೇ? ಇದ್ದರೆ ಕೈಯನ್ನು ಅಲುಗಾಡಿಸಿರಿ.

ಇಷ್ಟು ಶ್ರೇಷ್ಠ ವ್ಯಕ್ತಿತ್ವ ಉಳ್ಳವರನ್ನು ನೋಡಿ ಬಾಪ್‌ದಾದಾರವರಿಗೆ ಎಷ್ಟು ಖುಷಿಯಾಗಿರುತ್ತದೆ? ನಿಮಗೆ ಕೂಡ ಖುಷಿ ಇದೆ ಅಲ್ಲವೇ. ಬಾಪ್‌ದಾದಾ ಮಕ್ಕಳ ಇಂತಹ ಶ್ರೇಷ್ಠತೆಯನ್ನು ನೋಡಿ ಯಾವ ಹಾಡನ್ನು ಹಾಡುತ್ತಿದ್ದಾರೆಯೋ ತಿಳಿದಿದೆಯೇ? ನೀವು ಕೂಡ ಹಾಡುತ್ತಿದ್ದೀರಿ. ಬಾಬಾ ಕೂಡ ಹಾಡುತ್ತಿದ್ದಾರೆ. ತಂದೆಯ ಹಾಡು ಕೇಳಿಸುತ್ತಿದೆಯೇ ಅಥವಾ ಟೇಪ್ ರೆಕಾರ್ಡರ್‌ನಲ್ಲಿ ಬರುವ ಹಾಡು ಕೇಳಿಸುತ್ತಿದೆಯೇ? ಈ ಟೇಪ್ ರೆಕಾರ್ಡರ್ ಅತೀತವಾದುದು, ಆಟೋಮ್ಯಾಟಿಕ್ ಆಗಿ ಕೆಲಸ ಮಾಡುವಂತಹದ್ದು. ಪ್ರತ್ಯೇಕವಾಗಿ ಇಡಲು ಶ್ರಮ ಮಾಡುವ ಅವಶ್ಯಕತೆ ಇರುವುದಿಲ್ಲ. ಹೃದಯದಲ್ಲಿರುವ ಹಾಡನ್ನು ಹೃದಯದಲ್ಲಿರುವವರೇ ಕೇಳಬಲ್ಲರು. ಕೇವಲ ಕಿವಿ ಇರುವವರು ಕೇಳಲು ಆಗುವುದಿಲ್ಲ. ಮನಸ್ಸು ಇರುವವರೇ ಕೇಳಬಲ್ಲರು. ಎಲ್ಲರೂ ಹೃದಯವಿರುವವರೇ ತಾನೇ? ದಿಲ್ವಾಡ ಮಂದಿರದಲ್ಲಿ ನಿಮ್ಮ ಚಿತ್ರ ಇದೆಯಲ್ಲವೇ? ಎಲ್ಲರೂ ನಿಮ್ಮ ಚಿತ್ರವನ್ನು ನೋಡುತ್ತಿದ್ದಾರೆ. ಬಾಪ್‌ದಾದಾ ಸದಾ ಮಕ್ಕಳ ಚಿತ್ರವನ್ನು ಮತ್ತು ಚರಿತ್ರೆಯನ್ನು ನೋಡುತ್ತಾ ಇರುತ್ತಾರೆ ಇಂದು ವ್ಯಕ್ತಿತ್ವವನ್ನು ನೋಡುತ್ತಿದ್ದಾರೆ. ಈ ವ್ಯಕ್ತಿತ್ವ ಸದಾ ಸ್ಮೃತಿಯಲ್ಲಿ ಪ್ರತ್ಯಕ್ಷವಾಗಿರಬೇಕು. ಇದ್ದೇ ಇರುತ್ತದೆ ಎಂದಲ್ಲ, ಇರಬೇಕು ಮತ್ತು ಕಾಣಿಸಬೇಕು. ಅನುಭವದಲ್ಲಿ ಬರಬೇಕು. ಸದಾ ಇಂತಹ ವ್ಯಕ್ತಿತ್ವದಲ್ಲಿ ಇರುವವರ ಗುರುತುಗಳು ಏನು? ಆ ಗುರುತುಗಳಿಂದ ನೀವು ವ್ಯಕ್ತಿತ್ವದಲ್ಲಿ ಇದ್ದೀರಿ ಎಂದು ತಿಳಿಯುತ್ತದೆ. ಈ ಆತ್ಮಿಕ ವ್ಯಕ್ತಿತ್ವ ಪ್ರತ್ಯಕ್ಷ ರೂಪದಲ್ಲಿ ಇದ್ದರೆ ಅವರ ನಯನಗಳು ಅವರ ಮುಖ, ನಡವಳಿಕೆ, ಸಂಕಲ್ಪ ಮತ್ತು ಸಂಬಂಧ ಎಲ್ಲವೂ ಪ್ರಸನ್ನವಾಗಿ ಇರುತ್ತದೆ. ಸದಾ ಪ್ರಸನ್ನಚಿತ್ತವಾಗಿ ಸಹ ಇರುತ್ತಾರೆ. ಪ್ರಶ್ನಚಿತ್ತವಾಗಿ ಅಲ್ಲ. ಪ್ರಶ್ನಚಿತ್ತರಾಗಿ ಇದ್ದರೆ ನಡವಳಿಕೆಯು ವ್ಯಕ್ತಿತ್ವವಾಗಿರುವುದಿಲ್ಲ. ಮುಖದಲ್ಲಿಯೂ ಪ್ರಸನ್ನತೆಯ ಹೊಳಪು ಕಾಣಿಸುವುದಿಲ್ಲ. ಏನೇ ಆದರೂ ವ್ಯಕ್ತಿತ್ವ ಇರುವವರ ಪ್ರಸನ್ನತೆ ಬಚ್ಚಿಡಲಾಗುವುದಿಲ್ಲ. ಗುಪ್ತವಾಗಿರುವುದಿಲ್ಲ. ಪ್ರಸನ್ನ ಚಿತ್ತ ಆತ್ಮ ಯಾವ ಆತ್ಮ ಎಂತಹ ಗೊಂದಲದಲ್ಲಿದ್ದರೂ, ಅಶಾಂತಿಯಿಂದ ಇದ್ದರೂ, ತನ್ನ ಪ್ರಸನ್ನತೆಯ ದೃಷ್ಟಿಯಿಂದ ಅವರನ್ನು ಪ್ರಸನ್ನ ಮಾಡುತ್ತದೆ. ತಂದೆಯ ಮಹಿಮೆ "ದೃಷ್ಟಿಯಿಂದ ಅದ್ಭುತ(ತೃಪ್ತ, ಪ್ರಸನ್ನ) ಮಾಡುವವರು" ಇದು ಕೇವಲ ತಂದೆಯ ಮಹಿಮೆಯೇ ಅಲ್ಲ ನಿಮ್ಮ ಮಹಿಮೆ ಕೂಡ ಇದೇ ಆಗಿದೆ. ಮತ್ತು ಈಗ ಸಮಯ ಎಷ್ಟು ಸಮೀಪವಾಗಿ ಬರುತ್ತಾ ಇದೆಯೋ ಅಷ್ಟು ದೃಷ್ಟಿಯಿಂದ ಅದ್ಭುತ ಮಾಡುವ ಸೇವೆ ಮಾಡುವ ಸಮಯ ಬರುತ್ತಿದೆ. ಏಳು ದಿನಗಳ ಕೋರ್ಸ್ ಹೇಳುವುದಿಲ್ಲ. ಒಂದು ದೃಷ್ಟಿಯಿಂದಲೇ ಪ್ರಸನ್ನಚಿತ್ತರಾಗಿಬಿಡುತ್ತಾರೆ. ಅವರ ಮನಸ್ಸಿನಲ್ಲಿರುವ ಆಸೆ ನಿಮ್ಮ ಮೂಲಕ ಪೂರ್ಣವಾಗಿ ಬಿಡುತ್ತದೆ. ಎಲ್ಲರೂ ಏನೆಂದು ಭಾವಿಸುತ್ತಿದ್ದೀರಿ? ಆದಿಸೇವಾರತ್ನಗಳು ಏನೆಂದು ಭಾವಿಸುತ್ತಿದ್ದೀರಿ? ಇಂತಹ ಸೇವೆಯನ್ನು ಮಾಡಬಲ್ಲಿರಿ ತಾನೆ?

ಈಗ ನೋಡಿರಿ ನೀವೆಲ್ಲರೂ 40 ವರ್ಷದ ಸೇವೆ ಮಾಡಿದ್ದೀರಿ ಅಥವಾ ಇನ್ನೂ ಹೆಚ್ಚು ಕೂಡ ಮಾಡಿರಬಹುದು. ಕೆಲವರಿಗೆ ಒಂದು ಎರಡು ವರ್ಷಗಳು ಕಡಿಮೆ ಇರಬಹುದು, ಕೆಲವರಿಗೆ ಹೆಚ್ಚೂ ಇರಬಹುದು. ಈಗ ನೀವೆಲ್ಲರೂ ನಿಮ್ಮ ಸಹಯೋಗಿಗಳು ಈ ಸೇವೆಯನ್ನು ಕಲಿಸಿದ್ದಾರೆ ಮತ್ತು ನಿಮಿತ್ತವಾಗಿ ಕೂಡ ಮಾಡಿದ್ದಾರೆ. ಈಗ ನೀವು(ಆದಿರತ್ನ) ಏನು ಮಾಡುತ್ತೀರಿ? ಆ ಸೇವೆಯನ್ನಂತೂ ಅವರು ಕೂಡ ಮಾಡುತ್ತಿದ್ದಾರೆ. ಆದಿರತ್ನಗಳಾದ ನೀವು ಅತೀತವಾಗಿರುವ,

ಪ್ರಿಯವಾಗಿರುವ ಸೇವೆಯನ್ನು ಮಾಡುತ್ತಿದ್ದೀರಲ್ಲವೇ? ಈಗ ದೃಷ್ಟಿಯಿಂದ ಅದ್ಭುತವನ್ನು ಎಷ್ಟು ಜನ ಮಾಡಿದ್ದೀರೋ ಅವರಿಗೆ ಉತ್ಸವವಾಗುತ್ತದೆ. ಒಂಬತ್ತು ಲಕ್ಷಗಳಲ್ಲಿ ಎಷ್ಟು ಜನರನ್ನು ತಯಾರು ಮಾಡಿದ್ದೀರಿ? ಇನ್ನು ಮುಂದೆಯಂತೂ 33 ಕೋಟಿ ಬರುತ್ತಾರೆ, 9 ಲಕ್ಷಗಳು ಅವರ ಮುಂದೆ ಬಹಳ ಕಡಿಮೆ. ಬೀಜವನ್ನು ಇಲ್ಲೇ ಹಾಕಬೇಕಲ್ಲವೇ? ಈಗ ಆದಿರತ್ನಗಳು ಏನು ಅದ್ಭುತ ಮಾಡಿ ತೋರಿಸುತ್ತಾರೋ ನೋಡುತ್ತೇನೆ. ಸೇವಾ ಕೇಂದ್ರಗಳನ್ನು ತೆರೆದಿದ್ದೀರಿ ಒಳ್ಳೊಳ್ಳೆಯ ಪ್ರೋಗ್ರಾಮ್ಗಳನ್ನು ಮಾಡಿದ್ದೀರಿ. ಇದರಲ್ಲಿ ಅದ್ಭುತವನ್ನು ಮಾಡಿ ತೋರಿಸಿದ್ದೀರಿ. ಇದಕ್ಕಂತೂ ಶುಭಾಶಯಗಳು. ಎರಡು ವಿಧವಾದ ಮಕ್ಕಳಿದ್ದಾರೆ. ಮೊದಲ ಮಕ್ಕಳು ಸ್ಥಾಪನೆಗೆ ನಿಮಿತ್ತವಾದ ಮಕ್ಕಳು ಮತ್ತು ನೀವು ವಿಶೇಷ ಸೇವೆಗೆ ಆದಿಮಕ್ಕಳು, ಇವರು(ದಾದಿಯರು) ಬೀಜವನ್ನು ಬಿತ್ತುವವರು ಮತ್ತು ನೀವು(ಸೇವೆಯ ಆದಿರತ್ನಗಳು) ಮೊಟ್ಟಮೊದಲ ಕಾಂಡ. ಕಾಂಡ ಗಟ್ಟಿಯಾಗಿ ಇರುತ್ತದೆಯಲ್ಲವೇ? ಕಾಂಡದ ಮೇಲೆ ಇಡೀ ವೃಕ್ಷವು ಆಧಾರವಾಗಿರುತ್ತದೆ. ಕಾಂಡದಿಂದಲೇ ಎಲ್ಲಾ ಶಾಖೆಗಳು ಬರುತ್ತವೆ. ಬೀಜವನ್ನು ಬಿತ್ತಿದವರು ಸೂಕ್ಷ್ಮವಾಗಿ ಶಕ್ತಿಯನ್ನು ಕೊಡುತ್ತಾರೆ ಆದರೆ ಪ್ರತ್ಯಕ್ಷವಾಗಿ ಕಾಣಿಸುವುದು ಕಾಂಡವೇ. ದಾದಿಯರು ಈಗ ಗುಪ್ತವಾಗಿ ಬಿಟ್ಟಿದ್ದಾರೆ. ಶಕ್ತಿಯನ್ನು ಕೊಡುತ್ತಿದ್ದಾರೆ ಮತ್ತು ಪ್ರತ್ಯಕ್ಷದಲ್ಲಿ ಸ್ಟೇಜ್ ಮೇಲೆ ಬರಲು ನೀವು ನಿಮಿತ್ತವಾಗಿದ್ದೀರಿ. ಸಮಾರೋಹಕ್ಕೆ ಬಂದಿರುವ ದೊಡ್ಡ ಅಣ್ಣಂದಿರು, ದೊಡ್ಡ ಅಕ್ಕಂದಿರೊಂದಿಗೆ ಬಾಪ್‌ದಾದಾ ಕೈಯನ್ನು ಎತ್ತಿಸಿದರು. ಆದ್ದರಿಂದಲೇ ಬಾಬಾ ಕೆಲಸವನ್ನು ಕೊಡುತ್ತಿದ್ದಾರೆ. ಸಮರೋಹ ಬಹಳ ಚೆನ್ನಾಗಿ ಆಚರಿಸಿಕೊಂಡಿದ್ದೀರಲ್ಲವೇ? ಬಾಪ್‌ದಾದಾ ಎಲ್ಲವನ್ನೂ ನೋಡಿದರು. ಅಲಂಕರಿಸಲ್ಪಟ್ಟ (ಶೃಂಗರಿಸಲ್ಪಟ್ಟ) ಮೂರ್ತಿಗಳನ್ನು ನೋಡಿದರು. ಆ ಸಮಯದಲ್ಲಿ ಕೂಡ ನಿಮ್ಮೆಲ್ಲರಿಗೆ ಇದೇ ಅನುಭವವಾಗುತ್ತದೆ ಅಲ್ಲವೇ. ನಾವು ಚೈತನ್ಯ ಮೂರ್ತಿಗಳು ಎಂದು ಅನುಭವವಾಗುತ್ತದೆ ಅಲ್ಲವೇ. ಅಲಂಕರಿಸಲಾದ ಮೂರ್ತಿಗಳು ಮಂದಿರದಿಂದ ಶಾಂತಿವನಕ್ಕೆ ತಲುಪಿದ ಹಾಗೆ ಇದೆ. ಬಾಪ್‌ದಾದಾ ಈಗ ಮಕ್ಕಳಿಂದ ಇದನ್ನೇ ಬಯಸುತ್ತಿದ್ದಾರೆ. ಈಗ ತೀವ್ರವಾದ ಸೇವೆಯನ್ನು ಪ್ರಾರಂಭಿಸಿರಿ ಎಂದು ಇಲ್ಲಿಯವರೆಗೆ ಏನಾದರೆ ಆಗಿದೆಯೋ ಅದು ಬಹಳ ಒಳ್ಳೆಯದು. ಈಗ ಸಮಯದನುಸಾರ ಇತರರಿಗೆ ವಾಣಿಯ ಅವಕಾಶವನ್ನು ಕೊಡಿರಿ. ಈಗ ಇತರರನ್ನು ಮೈಕ್ ನಂತೆ ತಯಾರು ಮಾಡಿರಿ. ನೀವು ಮೈಟ್ (ಶಕ್ತಿ)ಯಾಗಿ ಶಕ್ತಿಯನ್ನು ಕೊಡಿ. ಆಗಲೇ 9 ಲಕ್ಷಗಳು ಸ್ವತಹವಾಗಿ ತಯಾರಾಗುತ್ತಾರೆ. ಈಗ ಯಾರು ಫಂಕ್ಷನ್ ನಲ್ಲಿ ಕುಳಿತಿದ್ದಿರೋ, ಇನ್ನೂ ಯಾರಾದರೆ ಮಹಾರಥಿಗಳು ಇದ್ದೀರೋ, ಈಗ ಅವರೆಲ್ಲರ ಸೇವೆ ಇದೇ. ಕೇವಲ ಶಕ್ತಿಯನ್ನು ಕೊಡಬೇಕು. ಹೇಗಾದರೆ ತಂದೆ ಅವ್ಯಕ್ತ ವತನದಲ್ಲಿ ಒಂದೇ ಸ್ಥಾನದಲ್ಲಿ ಕುಳಿತು ನಾಲ್ಕೂ ಕಡೆಯ ಮಕ್ಕಳನ್ನು ಪಾಲನೆ ಮಾಡುತ್ತಿದ್ದಾರೆಯೋ ಅದೇ ವಿಧವಾಗಿ ಮಕ್ಕಳು ಕೂಡ ತಂದೆಯ ಸಮಾನವಾಗಿ ಒಂದೇ ಸ್ಥಾನದಲ್ಲಿರುತ್ತಲೂ ಬೆಹದ್ ಸೇವೆಯನ್ನು ಮಾಡಲಾಗುವುದಿಲ್ಲವೇ? ಆದಿರತ್ನಗಳು ಅರ್ಥಾತ್ ತಂದೆಯನ್ನು ಅನುಸರಿಸುವವರು. **ಕೆಲವರು ಮಕ್ಕಳು ತಮ್ಮಲ್ಲಿ ತಾವು ಮತ್ತು ಪರಸ್ಪರರಲ್ಲಿ ಕೂಡ ಇದೇ ಕೇಳುತ್ತಿದ್ದಾರೆ. ಬೇಹದ್ ವೈರಾಗ್ಯ ಹೇಗೆ ಬರುತ್ತದೆ ಎಂದು ಕಾಣಿಸುತ್ತಿಲ್ಲ. ಆದರೆ ಬೇಹದ್ ಸೇವೆಯಲ್ಲಿ ಬ್ಯುಸಿಯಾಗಿದ್ದರೆ ಬೇಹದ್ ವೈರಾಗ್ಯ ಸ್ವತಹವಾಗಿ ಬರುತ್ತದೆ. ಏಕೆಂದರೆ ಶಕ್ತಿಯನ್ನು ಕೊಡುವ ಸೇವೆ ನಿರಂತರವಾಗಿ ಮಾಡಬಹುದು. ಇದರಲ್ಲಿ ಆರೋಗ್ಯದ ವಿಷಯ, ಸಮಯದ ವಿಷಯ, ಎಲ್ಲವೂ ಸಹಜವಾಗಿ ಬಿಡುತ್ತವೆ. ರಾತ್ರಿ- ಹಗಲು ಈ ಬೇಹದ್ ಸೇವೆಯಲ್ಲಿ ಇರಬಹುದು.** ಬ್ರಹ್ಮಾ ತಂದೆಯನ್ನು ನೋಡಿದ್ದೀರಲ್ಲವೇ? ರಾತ್ರಿ ಕೂಡ ಕಣ್ಣುಗಳು ತೆಗೆದೇ ಇರುತ್ತಿದ್ದವು. ಬೇಹದ್ ಶಕ್ತಿಯನ್ನು ಕೊಡುವ ಸೇವೆಯನ್ನು ಮಾಡುತ್ತಾ ಇದ್ದರು. ಬೇಹದ್ ಸೇವೆ ಎಷ್ಟು ಬ್ಯುಸಿಯಾಗಿ

ಮಾಡುತ್ತದೆ  ಎಂದರೆ ಬೇಹದ್ ವೈರಾಗ್ಯ ಸ್ವತಹವಾಗಿ ಹೃದಯದಲ್ಲಿ ಬಂದುಬಿಡುತ್ತದೆ. ಪ್ರೋಗ್ರಾಮ್ ನಿಂದ ಅಲ್ಲ. ಇದು ಮಾಡಬೇಕು, ಅದು ಮಾಡಬೇಕು, ಈ ಪ್ಲಾನ್ ಅನ್ನು ತಯಾರು ಮಾಡುತ್ತಿದ್ದೇನೆ.  ಆದರೆ ಬೇಹದ್ ಸೇವೆಯಲ್ಲಿ ಇರುವುದು ಎಂಬುದು ಎಲ್ಲದಕ್ಕಿಂತಲೂ ಸಹಜ ಸಾಧನೆ. ಏಕೆಂದರೆ ಬೇಹದ್ದಾಗಿ ಶಕ್ತಿಯನ್ನು ಕೊಡುತ್ತಾ ಇದ್ದರೆ ಸಮೀಪವಾಗಿ ಇರುವವರು ಸ್ವತಹವಾಗಿ ಶಕ್ತಿಯನ್ನು ಪಡೆಯುತ್ತಾರೆ. ಬೇಹದ್ ಶಕ್ತಿ ಕೊಡುವುದರಿಂದ ವಾಯುಮಂಡಲವೂ ಕೂಡ ಸ್ವತಹವಾಗಿ ತಯಾರಾಗುತ್ತದೆ.  ಇದು ಈ ಸೆಂಟರ್ ನ ಜವಾಬ್ದಾರಿ, ಈ ಝೋನ್ ನ ಜವಾಬ್ದಾರಿ, ಎಂದು ತಿಳಿಯುವುದಲ್ಲ. ನೀವೆಲ್ಲರೂ ಒಂದೇ ದೇಶಕ್ಕೆ ರಾಜರಾಗಬೇಕಾ? ಅಥವಾ ವಿಶ್ವಕ್ಕೆ ರಾಜರಾಗಬೇಕಾ? ಹೇಗಾಗಬೇಕು? ಆದಿರತ್ನಗಳು ಆದ್ದರಿಂದ ವಿಶ್ವಕ್ಕೆ ಶಕ್ತಿಯನ್ನು ಕೊಡುವವರಾಗಿರಿ. ನಮಗೆ 20 ಸೆಂಟರ್ ಗಳು, 30 ಸೆಂಟರ್ ಗಳು, 200 ಸೆಂಟರ್ ಗಳಿಗೆ ಅಥವಾ ಒಂದು ಜೋನ್ಗೆ ಆಧಾರ, ಇವು ಬುದ್ಧಿಯಲ್ಲಿ ಇರಬಾರದು. ಏಕೆಂದರೆ ಇದು ಕಾಂಡದ ಕೆಲಸವಲ್ಲ. ಈ ಕೆಲಸ ಕೊಂಬೆ ರೆಂಬೆಗಳದು. ಅವರು ಕೂಡ ಮಾಡುತ್ತಾರೆ. ನೀವಾದರೆ ಕಾಂಡವಲ್ಲವೇ?  ಕಾಂಡದಿಂದಲೇ ಎಲ್ಲರಿಗೂ ಶಕ್ತಿ, ನೀವೆಲ್ಲರೂ ಇದೇ ಯೋಚಿಸುತ್ತಿದ್ದೀರಿ ಬೇಹದ್  ವೈರಾಗ್ಯ ಬರಬೇಕು ಎಂದು. ಇದು ಬಹಳ ಒಳ್ಳೆಯದು, ಈಗ ವಿನಾಶವಾಗಿ ಬಿಡುತ್ತದೆ ಆದರೆ 9 ಲಕ್ಷಗಳು ಕೂಡ ತಯಾರಾಗಲಿಲ್ಲ. ಸತ್ಯಯುಗದ ಆದಿ ಆತ್ಮರೇ ತಯಾರಾಗದೆ ವಿನಾಶವಾಗಿ ಬಿಟ್ಟರೆ ಸತ್ಯಯುಗದಲ್ಲಿ ಯಾರು ಬರುತ್ತೀರಿ? ಎರಡು, ಮೂರು ಸಾವಿರದ ಮೇಲೆ ರಾಜ್ಯವನ್ನು ಮಾಡುತ್ತೀರಾ? ನಾಲ್ಕೈದು ಲಕ್ಷದ ಮೇಲೇ ರಾಜ್ಯವನ್ನು ಮಾಡುತ್ತೀರಾ? ಆದ್ದರಿಂದ ಈಗ ಬೇಹದ್ ಸೇವೆಯನ್ನು ಪ್ರಾರಂಭಿಸಿರಿ. ಪಾಂಡವರು ಏನೆಂದು ಭಾವಿಸುತ್ತಿದ್ದೀರಿ? ಬೇಹದ್ ಸೇವೆಯನ್ನು ಮಾಡುತ್ತಿರಲ್ಲವೇ? ಪಾಂಡವರು ತಯಾರಾಗಿದ್ದೀರಾ? ಬೇಹದ್ ನಲ್ಲಿ ಹೋಗುವುದರಿಂದ ಹದ್ದಿನ(ಪರಿಮಿತ) ವಿಷಯಗಳು ಸ್ವತಹವಾಗಿ ತೊಲಗಿ ಹೋಗುತ್ತವೆ. ಬಿಡಿಸಿಕೊಳ್ಳುವುದರಿಂದ ತೊಲುಗುವುದಿಲ್ಲ. ಬೇಹದ್ ಶಕ್ತಿಯಿಂದ ತೊಲಗಿಸಿಕೊಳ್ಳುವುದು, ಇದು ತೀವ್ರವಾದ ಸೇವೆಯ ಫಲಿತಾಂಶವಾಗಿದೆ.

ಬಾಪ್‌ದಾದಾರವರಿಗೆ ತಿಳಿದಿದೆ ನಾಜೂಕಾದ ಪರಿಸ್ಥಿತಿಯಲ್ಲೂ ಸಹ  ನಿಮಿತ್ತವಾದ ಆತ್ಮರು ಸೇವೆಯ ಪ್ರತ್ಯಕ್ಷ ಉದಾಹರಣೆಯನ್ನು ತೋರಿಸಿದ್ದಾರೆ. ಆದರೆ ನಿಮ್ಮೆಲ್ಲರ ಬುನಾದಿ ಅಥವಾ ಕ್ಷಣದ ಪರಿವರ್ತನೆಯ ಮೂಲ ಅನುಭವ ಇದೇ- ಬ್ರಹ್ಮಾ ತಂದೆಯನ್ನು ನೋಡಿದಿರಿ, ಬ್ರಾಹ್ಮಣರಾಗಿ ಬಿಟ್ಟಿರಿ. ಸೇವೆಯ ವರದಾನ ಲಭಿಸಿದೆ  ಮತ್ತು ಸೇವೆಯಲ್ಲಿ ನಿಮಗ್ನವಾಗಿ ಬಿಟ್ಟಿರಿ. ಬಾಪ್‌ದಾದಾ ಎಲ್ಲರ ಅನುಭವ ಕೂಡ ಕೇಳಿದರು. ಒಳ್ಳೆಯ ಅನುಭವಗಳನ್ನು ಕೇಳಿದ್ದೀರಿ.  ನಿಮ್ಮೆಲ್ಲರ ಅನುಭವವೇನೆಂದರೆ- ಬ್ರಹ್ಮ ತಂದೆಯನ್ನು ನೋಡಿದ್ದೀರಿ, ಯೋಚನೆ ಕೂಡ ಮಾಡಲಿಲ್ಲ, ಸಹಿಸುತ್ತಿದ್ದೇವೆ ಎಂದು ಸಹನೆಯನ್ನು ಕೂಡ ಅನುಭವ ಮಾಡಲಿಲ್ಲ. ದೊಡ್ಡ ವಿಷಯವೆಂದು ಅನಿಸಲಿಲ್ಲ. ಹಾಗೆಯೇ ಈಗ ಪ್ರತಿಯೊಂದು ಬ್ರಾಹ್ಮಣ ಆತ್ಮನಲ್ಲಿ ಬ್ರಹ್ಮ ತಂದೆಯು ಕಾಣಿಸಬೇಕು. ಇದೇ ಸೇವೆಯ ತೀವ್ರತೆಗೆ ಸಾಧನೆಯಾಗಿದೆ. ಬ್ರಹ್ಮಾತಂದೆ ನಿಮಗೆ ಯಾವುದಾದರೂ ಕೋರ್ಸ್ ಅನ್ನು ಹೇಳಿದ್ದರೇ?  ಕೋರ್ಸ್ ನಂತರ ಹೇಳಿದರು ಆದರೆ ಮೊದಲು ನೋಡಿದ ತಕ್ಷಣ ತಂದೆಯ ಮಕ್ಕಳಾಗಿ ಬಿಟ್ಟಿರಿ. ಬ್ರಹ್ಮಬಾಬಾರೊಂದಿಗೆ ಬಾಬಾ ಇದ್ದರು. ಆದ್ದರಿಂದ ಶ್ರಮ ಎನಿಸಲಿಲ್ಲ. ಹಾಗೆಯೇ ನೀವೆಲ್ಲರೂ ಕೂಡ ಬಾಪ್‌ದಾದಾರವರನ್ನು ನಿಮ್ಮಲ್ಲಿ ಸಮಾವೇಶಗೊಳಿಸಿಕೊಂಡು ದೃಷ್ಟಿಯಿಂದ ಅದ್ಭುತವನ್ನು ಮಾಡಿರಿ. ನಿಮ್ಮೆಲ್ಲರಿಗೂ ಈ

ಅನುಭವವಿದೆಯಲ್ಲವೇ? ಅನುಭವಿಯಲ್ಲವೇ? ನೋಡಿದಿರಿ, ತಂದೆಯವರಾಗಿ ಬಿಟ್ಟರಿ. ಆದರೆ ಈಗ? ಯೋಚಿಸುತ್ತಿದ್ದಾರೆ, ಟ್ರೈನಿಂಗ್ ಪಡೆಯುತ್ತಿದ್ದಾರೆ, ಮತ್ತೆ ಟ್ರೈಲ್ ಹಾಕುತ್ತಿದ್ದಾರೆ ಆನಂತರ ಕೆಲವರು ಇರುತ್ತಾರೆ, ಕೆಲವರು ಹೋಗುತ್ತಿದ್ದಾರೆ. ನೀವು ಇಷ್ಟು ಶ್ರಮವನ್ನು ತೆಗೆದುಕೊಂಡಿದ್ದೀರಾ? ಟ್ರೈನಿಂಗ್ ಪಡೆದಿದ್ದಿರೇ? ಟ್ರೈಲ್ಗೆ ಬಂದಿದ್ದೀರಾ? ಬಂದಿರಿ ಮತ್ತು ಅರ್ಪಣೆ ಯಾಗಿ ಬಿಟ್ಟರಿ. ಇಂತಹ ಸೇವೆ ಬ್ರಹ್ಮಾ ತಂದೆ ಒಬ್ಬರೇ ಮಾಡಲಾಯಿತು ಮತ್ತು ನೀವೆಲ್ಲರೂ ಮಾಡಲಾಗುವುದಿಲ್ಲವೇ? ನಿಮ್ಮ ವ್ಯಕ್ತಿತ್ವವನ್ನು ನೀವು ತಯಾರು ಮಾಡಿಕೊಳ್ಳಿರಿ. ಬ್ರಹ್ಮಾತಂದೆಗೆ ವ್ಯಕ್ತಿತ್ವವಿರುತ್ತಿತ್ತು ತಾನೇ! ಮುಖದಲ್ಲಾದರೂ ಅಥವಾ ನಡವಳಿಕೆಯಲ್ಲಾದರೂ ವ್ಯಕ್ತಿತ್ವವಿರುತ್ತಿತ್ತು ಆದ್ದರಿಂದಲೇ ಆಕರ್ಷಣೆಯಾದರು, ಆದ್ದರಿಂದ ತಂದೆಯನ್ನು ಫಾಲೋ ಮಾಡಿರಿ. ತಂದೆ ಆದಿಯಲ್ಲಿ ನಿಮ್ಮನ್ನು ನಿಮಿತ್ತ ಮಾಡಿದರು. ಆದಿಯಲ್ಲಿ ಸೇವೆಗೆ, ಸ್ಥಾಪನೆಗೆ ನಿಮಿತ್ತವಾದ ನೀವು ಅಂತಿಮದವರೆಗೆ ಸೇವೆಯಲ್ಲಿಯೇ ಇರಬೇಕು. ಆರೋಗ್ಯಪರವಾಗಿ ಶರೀರದಿಂದ ತಿರುಗಲು ಆಗದಿದ್ದರೂ ಮನಸ್ಸಿನಿಂದ ತಿರುಗಬಲ್ಲಿರಿ ತಾನೆ? ಇದರಲ್ಲಿ ಖರ್ಚು ಕೂಡ ಇರುವುದಿಲ್ಲ. ವೀಸಾ ತೆಗೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲ. ಓಡುವ ಅವಶ್ಯಕತೆ ಇರುವುದಿಲ್ಲ. ಮಲಗಿಕೊಂಡು ಕೂಡ ಮಾಡಬಹುದು ಏನೆಂದು ಭಾವಿಸುತಿದ್ದೀರಿ? ಈಗ ಯಾವುದಾದರೂ ಇಂತಹ ಪ್ಲಾನ್‌ಅನ್ನು ತಯಾರು ಮಾಡಿರಿ. ಹೊಸ ಪಾಠವನ್ನು ಪ್ರಾರಂಭಿಸಿರಿ. ಈಗ ಒಂದು ಫಂಕ್ಷನ್ ನಂತೂ ಮಾಡಿದ್ದೀರಿ. ಸೇವೆಗೆ ಪ್ರತ್ಯಕ್ಷ ಫಲ ಲಭಿಸಿದೆ. ಈಗ ಹೊಸ ಸೇವೆಯನ್ನು ಪ್ರಾರಂಭಿಸಿರಿ.

ಬಾಪ್‌ದಾದಾ ಕೇವಲ ಎದುರುಗಡೆ ಕುಳಿತಿರುವವರಿಗೇ ಅಲ್ಲ. ಎಲ್ಲರಿಗೂ ಹೇಳುತ್ತಿದ್ದಾರೆ. ವಿದೇಶದಲ್ಲಿ ಕೇಳುವವರಿಗೂ ಹೇಳುತ್ತಿದ್ದಾರೆ. ಇಲ್ಲಿ ಕೇಳುತ್ತಿದ್ದರೂ, ಶಾಂತಿವನದಲ್ಲಿ ಕೇಳುತ್ತಿದ್ದರೂ, ಮೇಲೆ ಪಾಂಡವ ಭವನದಲ್ಲಿ ಕೇಳುತ್ತಿದ್ದರೂ, ವಿದೇಶದಲ್ಲಿ ಕೇಳುತ್ತಿದ್ದರೂ, ಎಲ್ಲರಿಗೂ ಹೇಳುತ್ತಿದ್ದಾರೆ. ಈಗ ಬೇಹದ್ ಸೇವಾಧಾರಿಯಾಗಿರಿ. ಬೇಹದ್ ಸೇವೆಯಲ್ಲಿ ಸಮಯವನ್ನು ಉಪಯೋಗಿಸಿರಿ. ಬೇಹದ್ ಸೇವೆಯಲ್ಲಿ ಸಮಯವನ್ನು ಉಪಯೋಗಿಸುವುದರಿಂದ ಸಮಸ್ಯೆಗಳು ಸ್ವತಹವಾಗಿ ತೊಲಗಿ ಹೋಗುತ್ತವೆ. ಏಕೆಂದರೆ ಅಜ್ಞಾನಿಯಾದರೂ, ಜ್ಞಾನಿಯಾದರೂ ಸಮಯವನ್ನು ಸಮಸ್ಯೆಯಲ್ಲಿ ಉಪಯೋಗಿಸುತ್ತಿದ್ದಾರೆ. ಇತರರು ಸಮಯವನ್ನು ತೆಗೆದುಕೊಳ್ಳಬೇಕಾಗುತ್ತದೆ ಎಂದರೆ ಅವರು ಬಲಹೀನ ಆತ್ಮರು, ಅವರಿಗೆ ಶಕ್ತಿ ಇಲ್ಲ ಎಂದು ಪ್ರಮಾಣವಾಗುತ್ತದೆ. ಯಾರಿಗಾದರೆ ಶಕ್ತಿ ಇಲ್ಲವೋ, ಕುಂಟರಿದ್ದಾರೆಯೋ ನೀವು ಓಡಲು ಹೇಳಿದರೆ ಓಡಬಲ್ಲರೇ? ಅಥವಾ ಬೀಳುತ್ತಾರೆಯೇ? ಬ್ರಾಹ್ಮಣ ಆತ್ಮರಾದರೂ ಕೂಡ ಸಮಸ್ಯೆಗೆ ವಶವಾಗಿ ಶಕ್ತಿ ಇಲ್ಲದಿದ್ದರೆ ಆ ಸಮಯದಲ್ಲಿ ಬಲಹೀನ ಆತ್ಮನೇ. ಆಗ ಎಲ್ಲಿಂದ ಶಕ್ತಿಯನ್ನು ತೆಗೆದುಕೊಳ್ಳುತ್ತದೆ? ಸ್ವಯಂ ತಂದೆಯಿಂದ ಶಕ್ತಿಯನ್ನು ಪಡೆಯಲಾಗುವುದಿಲ್ಲ. ಏಕೆಂದರೆ ಬಲಹೀನ ಆತ್ಮ ಆದ್ದರಿಂದ ಏನು ಮಾಡುತ್ತಾರೆ. ಬಲಹೀನ ಆತ್ಮನಿಗೆ ಬೇರೆಯವರ ರಕ್ತವನ್ನು ಏರಿಸಿ ಶಕ್ತಿಯನ್ನು ಕೊಡುತ್ತಾರೆ. ಯಾವುದಾದರೂ ಶಕ್ತಿಶಾಲಿ ಇಂಜೆಕ್ಷನ್‌ಅನ್ನು ಕೊಟ್ಟು ಶಕ್ತಿಯನ್ನು ಕೊಡುತ್ತಾರೆ. ಹಾಗೆಯೇ ನೀವು ಕೂಡ ಶಕ್ತಿಯ, ಗುಣಗಳ ಸಹಯೋಗವನ್ನು ಕೊಡಿರಿ. ಅವರಲ್ಲಿ ಇಲ್ಲವೇ ಇಲ್ಲ ಆದ್ದರಿಂದ ನಿಮ್ಮದು ಕೊಡಿ. ಇಷ್ಟಕ್ಕೆ ಮುಂಚೆ ಕೂಡ ತಿಳಿಸಿದ್ದೇನೆ ದಾತರಾಗಿ ಎಂದು. ಅವರು ಅಸಮರ್ಥರು ಅವರಿಗೆ ಸಮರ್ಥತೆಯನ್ನು ಕೊಡಿ. ಗುಣಗಳು, ಶಕ್ತಿಯನ್ನು, ಸಹಯೋಗವನ್ನು ಕೊಡುವುದರಿಂದ ನಿಮಗೆ ಆಶೀರ್ವಾದಗಳು ಲಭಿಸುತ್ತವೆ. ಆ ಆಶೀರ್ವಾದಗಳು

ಲಿಫ್ಟ್ ಗಿಂತಲೂ ವೇಗವಾದ ರಾಕೆಟಿನಂತೆ. ಆಗ ನಿಮ್ಮ ಪುರುಷಾರ್ಥಕ್ಕೆ ಸಮಯ ಉಪಯೋಗಿಸುವ ಅವಶ್ಯಕತೆ ಇರುವುದಿಲ್ಲ. ಆಶೀರ್ವಾದಗಳ ರಾಕೆಟ್ ನಿಂದ ಹಾರಿ ಹೋಗಿಬಿಡುತ್ತೀರಿ. ಪುರುಷಾರ್ಥದ ಶ್ರಮಕ್ಕೆ ಬದಲು ಸಂಗಮಯುಗೀ ಪ್ರಾಪ್ತಿಗಳನ್ನು ಅನುಭವ ಮಾಡಿಕೊಳ್ಳುತ್ತೀರಿ. ಆಶೀರ್ವಾದಗಳನ್ನು ಪಡೆಯುವುದು ಕಲಿಯಿರಿ ಮತ್ತು ಕಲಿಸಿರಿ. ನಿಮ್ಮ ಸಹಜ ಗಮನ ಮತ್ತು ಆಶೀರ್ವಾದಗಳು, ಗಮನ ಕೂಡ ಒತ್ತಡದಲ್ಲಿ ಬದಲಾಗಬಾರದು. ಸಹಜವಾಗಿ ಇರಬೇಕು. ಜ್ಞಾನವೆಂಬ ದರ್ಪಣ ಸದಾ ಎದುರಿಗಡೆ ಇದ್ದೇ ಇದೆ. ಇದರಲ್ಲಿ ಸ್ವತಹವಾಗಿ, ಸಹಜವಾಗಿ ನಿಮ್ಮ ಚಿತ್ರವು ಕಾಣಿಸುತ್ತದೆ. ಆದ್ದರಿಂದ ವ್ಯಕ್ತಿತ್ವಕ್ಕೆ ಗುರುತು- ಪ್ರಸನ್ನತೆ ಎಂದು ಹೇಳಿದ್ದೆನು. ಈ ಏಕೆ, ಏನು, ಹೇಗೆ, ಇಂತಹ ಏ ಏ ಎಂಬ ಭಾಷೆಯನ್ನು ಸಮಾಪ್ತಿ ಮಾಡಿರಿ. ಆಶೀರ್ವಾದಗಳನ್ನು ಕೊಡುವುದು ಮತ್ತು ಪಡೆಯುವುದನ್ನು ಕಲಿಯಿರಿ. ಪ್ರಸನ್ನವಾಗಿ ಇರುವುದು ಮತ್ತು ಪ್ರಸನ್ನರನ್ನಾಗಿ ಮಾಡುವುದೇ ಆಶೀರ್ವಾದಗಳನ್ನು ಕೊಡುವುದು ಮತ್ತು ಪಡೆಯುವುದು. ಯಾರು ಹೇಗೇ ಇದ್ದರೂ ಕೂಡ ನಿಮ್ಮ ಮನಸ್ಸಿನಿಂದ ಪ್ರತಿಯೊಂದು ಆತ್ಮನ ಪ್ರತಿ ಆಶೀರ್ವಾದಗಳೇ ಬರಬೇಕು. ಇವರಿಗೆ ಕೂಡ ಕಲ್ಯಾಣವಾಗಬೇಕು, ಇವರ ಬುದ್ಧಿ ಕೂಡ ಶಾಂತಿಯಿಂದಿರಬೇಕು ಎಂದು. ಇವರು ಹೀಗಿದ್ದಾರೆ, ಅವರು ಹಾಗಿದ್ದಾರೆ, ಹೀಗಲ್ಲ. ಎಲ್ಲರೂ ಚೆನ್ನಾಗಿರಬೇಕು. ಆಶೀರ್ವಾದಗಳನ್ನು ಕೊಡುವುದು ಬರುತ್ತದೆಯೇ? ಆಶೀರ್ವಾದಗಳನ್ನು ತೆಗೆದುಕೊಳ್ಳುವುದಂತೂ ಬರುತ್ತದೆ ಆದರೆ ಕೊಡುವುದೂ ಬರುತ್ತದೆಯೇ? ಕೊಡದಿದ್ದರೆ ಪಡೆಯುವುದು ಹೇಗೆ? ಕೊಡಿ ಮತ್ತು ತೆಗೆದುಕೊಳ್ಳಿರಿ. ಇವರು ಮಾಡಬೇಕು ಎಂದುಕೊಳ್ಳಬಾರ ಯಾವ ಕರ್ಮವನ್ನು ನಾನು ಮಾಡುತ್ತೇನೆಯೋ ನನ್ನನ್ನು ನೋಡಿ ಎಲ್ಲರೂ ಮಾಡುತ್ತಾರೆ"ದು ನಾನು ಮಾಡಬೇಕು ಎಂದುಕೊಳ್ಳಬೇಕು. ಬ್ರಹ್ಮಾ ತಂದೆಯ ಒಂದು ಸ್ಲೋಗನ್ ಇದೆ. ಬ್ರಹ್ಮಾ ತಂದೆ ಪದೇ ಪದೇ ಹೇಳುತ್ತಿದ್ದರು. **"ಯಾವ ಕರ್ಮವನ್ನು ನಾನು ಮಾಡುತ್ತೇನೆಯೋ ನನ್ನನ್ನು ನೋಡಿ ಎಲ್ಲರೂ"** ಎಂದು. ಇತರರು ಮಾಡಿದರೆ ನಾನು ಮಾಡುತ್ತೇನೆ ಎಂಬುದು ಸ್ಲೋಗನ್ ಅಲ್ಲ. ನಾನು ಏನು ಮಾಡಿದರೆ ನನ್ನನ್ನು ನೋಡಿ ಎಲ್ಲರೂ ಮಾಡುತ್ತಾರೆ. ಇಲ್ಲದಿದ್ದರೆ ಸ್ಲೋಗನನ್ನು ಬದಲಾಯಿಸಿ ಬಿಡಿ. ಜಗದಂಬಾ ಸರಸ್ವತಿಯ ವಿಶೇಷ ಸ್ಲೋಗನ್ **"ಮಾಲಿಕನ ಆಜ್ಞೆ ನನ್ನನ್ನು ನಡೆಸುತ್ತಿದೆ, ನಾವು ನಿಮಿತ್ತವಾಗಿ ನಡೆಯುತ್ತಿದ್ದೇವೆ"**. ಈ ಎರಡು ಸೂಕ್ತಿಗಳನ್ನು ಸದಾ ಪ್ರತ್ಯಕ್ಷವಾಗಿ ಸ್ಮೃತಿಯಲ್ಲಿಟ್ಟುಕೊಳ್ಳಿರಿ. ಹೌದು, ಕೇಳುತ್ತಿದ್ದೇವೆ, ನೆನಪಿರುತ್ತದೆ.... ಎಂದು ಹೇಳುವುದಲ್ಲ. ಕರ್ಮದಲ್ಲಿ ಕಾಣಿಸಬೇಕು. ಹಾಗಾದರೆ ಏನು ಮಾಡುತ್ತೀರಿ? ಆಶೀರ್ವಾದಗಳನ್ನು ತೆಗೆದುಕೊಂಡು ಆಶೀರ್ವಾದಗಳನ್ನು ಕೊಡುತ್ತೀರಾ ಅಥವಾ ಗ್ಲಾನಿ(ನಿಂದೆ) ಮಾಡಿ ಫೀಲ್ ಮಾಡುತ್ತೀರಾ? ಇವರು ಹೀಗೆ, ಇವರು ಹಾಗೆ ಎಂದು ಹೇಳಬೇಡಿರಿ. ಅವರಿಗೆ ಕೂಡ ಆಶೀರ್ವಾದಗಳನ್ನು ಕೊಡಿರಿ. ಅವರು ಬಲಹೀನರು ಮತ್ತು ವಶೀಭೂತವಾಗಿದ್ದಾರೆ, ಭಾಷೆಯನ್ನು ಮತ್ತು ಸಂಕಲ್ಪಗಳನ್ನು ಬದಲಾಯಿಸಿರಿ. ಇವರು ಬದಲಾಗುವುದಿಲ್ಲ ಎಂಬುದು ಸಂಕಲ್ಪದಲ್ಲಿ ಕೂಡ ಇರಬಾರದು. ನಾನು ಬದಲಾಗಬೇಕು ಎಂದು ತಿಳಿಯಬೇಕು. ಇತರ ವಿಷಯಗಳಲ್ಲಾದರೆ ನಾನು ನಾನು ಎಂದು ಬರುತ್ತದೆ ಆದರೆ ಈ ವಿಷಯದಲ್ಲಿ ನಾನು ಎಂಬುದು ಬರಬೇಕು. ಒಳ್ಳೆಯ ಕೆಲಸ ಆದರೆ ನಾನು ಎನ್ನುತ್ತೀರಿ. ಇಂತಹ ಕೆಲಸವಾದರೆ ಇವರು ಮಾಡಿದರು, ಇವರು ಎಂದರು ಎಂದು ಹೇಳುತ್ತೀರಿ. ವಿರುದ್ಧವಾಯಿತಲ್ಲವೇ? ಯಾರೇ ಏನೇ ಮಾಡಿದರೂ ಕೂಡ ನಾನೇನು ಮಾಡಬೇಕು, ನಾನೇನು ಯೋಚಿಸಬೇಕು ನಾನೇನು ಹೇಳಬೇಕು ಎಂದು ಈ ವಿಷಯದಲ್ಲಿ ನಾನು ಎಂಬ ಭಾವವನ್ನು ತನ್ನಿರಿ. ದೇಹಬಿಮಾನದಿಂದ ಕೂಡಿರುವ ನಾನು

ಅಲ್ಲ. ಸೇವಾ ಭಾವನೆಯಿಂದ ನಾನು ಎನ್ನಬೇಕು. ಹೀಗೆ ಶ್ರೇಷ್ಠ ತರಂಗಗಳನ್ನು ವ್ಯಾಪಿಸಿರಿ. ಈಗ ವಾಚಾದ ಉಪಯೋಗ ಕಡಿಮೆ, ಮನಸ್ಸಿನ ಸಹಯೋಗ, ಮನಸ್ಸಿನ ತರಂಗಗಳು ವೇಗವಾಗಿ ಕಾರ್ಯವನ್ನು ಮಾಡುತ್ತವೆ. ಇದನ್ನು ಮಾಡಬಲ್ಲಿರಾ?

ಮಾಡಬಲ್ಲಿರಿ ಎಂದಾಗ ಶುಭ ಕಾರ್ಯಕ್ಕಾಗಿ ತಡವೇಕೆ? ಈಗಿನಿಂದಲೇ ಆಗುತ್ತದೆಯಾ? ಪಾಂಡವರು ಹೇಳಿರಿ? ಮತ್ತೆ ಅಲ್ಲಿ ಹೋದ ನಂತರ ಬದಲಾಗಬಾರದು. ಅಲ್ಲಿಗೆ ಹೋಗಿ ಬಾಪ್‌ದಾದಾರವರಂತೂ ಹೇಳುತ್ತಾರೆ. ಸಾಕಾರದಲ್ಲಿ ಇರುವವರು ನಾವು ಬಾಪ್‌ದಾದಾರವರಿಗೆ ಏನು ಗೊತ್ತು? ಏನಾಗುತ್ತದೆಯೋ... ಎಂದು ಹೇಳಬೇಡಿರಿ. ಮಾತೆಯರು ಏನು ಹೇಳುತ್ತೀರಿ? ಬಾಪ್‌ದಾದಾರವರಿಗೆ ಮಕ್ಕಳನ್ನು ಸಂಭಾಳಿಸಬೇಕೆಂದು ಹೇಳಿದರೆ ತಿಳಿಯುತ್ತದೆ. ಎಂದು ಕೊಳ್ಳುತ್ತಿದ್ದೀರಾ? ಹೀಗೆ ಯೋಚಿಸುತ್ತಿದ್ದೀರಾ? ಬಾಪ್‌ದಾದಾ ದೊಡ್ಡವರಾದ ನಿಮ್ಮನ್ನೇ ಸಂಭಾಳಿಸುತ್ತಿದ್ದಾರೆ. ಮಕ್ಕಳನ್ನು ಸಂಭಾಳಿಸುವುದು ದೊಡ್ಡ ಕೆಲಸವೇ? ಅಲ್ಲಿಗೆ ಹೋಗಿ ಬದಲಾಗಬೇಡಿರಿ. ನಿಮಗೆ ಒಂದು ಹಾಡಿದೆಯಲ್ಲವೇ "ಪ್ರಪಂಚ ಬದಲಾದರೂ ಕೂಡ ನಾವು ಬದಲಾಗುವುದಿಲ್ಲ" ಎಂದು. ಈ ಹಾಡು ಗಟ್ಟಿಯಾಗಿದೆಯೇ? ನಿಜವೇ? ಆದರೆ ಕೈಯನ್ನೆತ್ತಿರಿ. ಆನಂತರ ನಿಮಗೆ 21ನೆಯ ಶತಾಬ್ಧ ಕಾನ್ಫರೆನ್ಸ್ ಅಲ್ಲವೇ? ಅಲ್ಲಿ ಪ್ರತ್ಯಕ್ಷದಲ್ಲಿ ಬಂದುಬಿಡುತ್ತದೆ ಅಲ್ಲವೇ. ಒಳ್ಳೆಯದು. ಇಡೀ ಸೃಷ್ಟಿಗೆ ಪ್ರತ್ಯಕ್ಷ ಪಾಠವನ್ನು ತೋರಿಸಿರಿ. ಹೀಗೆ ಆಗುತ್ತೇವೆ, ಹೀಗೆ ಆಗುತ್ತೇವೆ ಎಂದಲ್ಲ. ತಯಾರಾಗಿದ್ದೇವೆ ಎನ್ನಬೇಕು. ಉದಾಹರಣೆಗೆ ನೀವು ನಿಂದೆಯನ್ನು ಅಥವಾ ಗೊಂದಲವನ್ನು ಸಹಿಸಿದ್ದೀರಿ ಎಂದು ಇಟ್ಟುಕೊಳ್ಳಿ, ಸಮಾವೇಶಗೊಳಿಸಿದ್ದೀರಿ ಕೂಡ. ನೀವು ಸಹಿಸುವುದು ಸಮಾವೇಶಗೊಳಿಸುವುದು ಎಂದರೆ ನಿಮಗಾಗಿ ನಿಮ್ಮ ರಾಜಧಾನಿಯನ್ನು ನಿಶ್ಚಿತ ಮಾಡಿಕೊಳ್ಳುವುದು. ನಿಮಗೆ ಬಂದಿರುವ ನಷ್ಟವೇನು? ಲಾಭವೇ ಆಯಿತಲ್ಲವೇ? ನೋಡಲು ಬಹಳ ಕಷ್ಟವೆನಿಸುತ್ತದೆ. ವಿಷಯ ಎಷ್ಟು ದೊಡ್ಡದಾದರೂ ನೀವು ಸಹಿಸಿದ್ದೀರಿ. ನಿಮ್ಮ ರಾಜ್ಯಧಾನಿ ತಯಾರಾಗಿಬಿಟ್ಟಿದೆ ಎಂದರೆ ಸ್ಟ್ಯಾಂಪ್ ಬಿದ್ದಿದೆ. ಅದು ನಷ್ಟವೇ ಅಥವಾ ಲಾಭವೇ?

ಈಗ ಈ ಸೀಸನ್ ನಲ್ಲಿ ಬಾಪ್‌ದಾದಾ ನಾಲ್ಕೂ ಕಡೆಯ ಸ್ವರೂಪವನ್ನು ನೋಡಬೇಕೆಂದುಕೊಳ್ಳುತ್ತಿದ್ದಾರೆ. ಪ್ರತಿಯೊಂದು ಸೀಸನ್ನಲ್ಲಿ ಇದೇ ವಿಷಯಗಳನ್ನು ಕೇಳುವುದು ಚೆನ್ನಾಗಿ ಅನಿಸುತ್ತಿಲ್ಲ. ಅವೇ ಕಥೆಗಳು, ಕಥೆಗಳು, ಕಥೆಗಳು. ಮಕ್ಕಳನ್ನು ಪ್ರಶ್ನಿಸುತ್ತಿದ್ದಾರೆ ಈ ವಿಷಯಗಳನ್ನು ಕೂಡ ಎಲ್ಲಿಯವರೆಗೆ ಕೇಳುವುದು? ಇಲ್ಲದಿದ್ದರೆ ಒಂದು ವರ್ಷ ಅಥವಾ ಎರಡು ವರ್ಷಗಳು ಬೇಕು ಎಂದು ಸಮಯವನ್ನು ಕೇಳಿರಿ. ಆ ದಿನಾಂಕವನ್ನು ಕೂಡ ನಿರ್ಣಯಿಸಿರಿ. ಫಂಕ್ಷನ್ ನ ದಿನಾಂಕವನ್ನಂತೂ ನಿರ್ಣಯ ಮಾಡಿಬಿಟ್ಟಿದ್ದೀರಿ. ಈಗ ಈ ಫಂಕ್ಷನ್ ದಿನಾಂಕವೇನು?

ಎಲ್ಲರೂ ದೂರ ದೂರದಿಂದ ಪ್ರೀತಿಯಿಂದ ಬಂದಿದ್ದೀರಿ. ಬಾಪ್‌ದಾದಾ ವಿದೇಶಿಯರನ್ನು ಕೂಡ ನೋಡುತ್ತಿದ್ದಾರೆ. ವಿಧವಿಧವಾದ ಸಮಯವಾದರೂ ಬಹಳ ಪ್ರೀತಿಯಿಂದ ಸಮಯವನ್ನು ಕೊಟ್ಟು ಕೇಳುತ್ತಿದ್ದಾರೆ. (ವಿದೇಶದಲ್ಲಿ 200 ಸ್ಥಾನಗಳಲ್ಲಿ ಸ್ಯಾಟಲೈಟ್ ನಿಂದ ಮುರಳಿಯನ್ನು ಕೇಳುತ್ತಿದ್ದಾರೆ) ನೋಡಿರಿ ಇದು ಕೂಡ ತೀವ್ರ ವೇಗವಲ್ಲವೇ? ಇಲ್ಲಿಯ ಧ್ವನಿ ವಿದೇಶಗಳಲ್ಲಿ 200ಸ್ಥಾನಗಳಿಗೆ ತಲುಪುತ್ತಿದೆ. ಇದು ಕೂಡ ಧ್ವನಿಯ ವೇಗವಲ್ಲವೇ? ಇದು ಕೂಡ ಆವಿಷ್ಕರಣೆಯಲ್ಲವೇ? ಹಾಗಾದರೆ ನಿಮ್ಮ ಶಾಂತಿಯ ಶಕ್ತಿಯನ್ನು ತೀವ್ರ ಮಾಡಿಕೊಳ್ಳಲಾಗುವುದಿಲ್ಲವೇ? ವಿಜ್ಞಾನ ಭಾರತ ದೇಶದ ಧ್ವನಿಯನ್ನು ವಿದೇಶಗಳವರಿಗೆ ತಲುಪಿಸುತ್ತಿದೆ ಮತ್ತು ನಿಮ್ಮ ಶಾಂತಿಯ ಶಕ್ತಿಯಿಂದ ಹೃದಯದ ಶುಭ ಭಾವನೆಗಳು ಇತರ ಆತ್ಮರವರೆಗೆ

ತಲುಪಿಸಲಾಗುವುದಿಲ್ಲವೇ?  ತಲುಪಿಸುತ್ತೀರಿ ತಾನೇ? ಇಲ್ಲದಿದ್ದರೆ ಸೈನ್ಸ್ ಮುಂದಕ್ಕೆ ಹೋಗಿಬಿಡುತ್ತದೆ. ಸೈಲೆನ್ಸ್ ಪವರ್ ಕಡಿಮೆಯಾಗಿ ಬಿಡುತ್ತದೆ. ಆದ್ದರಿಂದ ಈಗ ಶಾಂತಿಯ ಶಕ್ತಿಯನ್ನು ಪ್ರತ್ಯಕ್ಷ ಮಾಡಿರಿ. ಎಲ್ಲರಲ್ಲಿಯೂ ಇದೆ ನನ್ನಲ್ಲಿ ಶಾಂತಿಯ ಶಕ್ತಿ ಇಲ್ಲ ಎಂದು ಒಬ್ಬ ಬ್ರಾಹ್ಮಣಾತ್ಮನು ಕೂಡ ಹೇಳುವುದಿಲ್ಲ. ಎಷ್ಟು ಜನ ಬ್ರಾಹ್ಮಣರಿದ್ದೀರಿ? ಇಷ್ಟೊಂದು ಬ್ರಾಹ್ಮಣರ ಶಕ್ತಿ ಮಾಡಲಾರದ್ದು ಏನಿದೆ? ಎಲ್ಲರಲ್ಲಿ ಶಾಂತಿ ಶಕ್ತಿ ಇದೆಯೇ? ಈಗ ಒಂದು ನಿಮಿಷದಲ್ಲಿ ನಿಮ್ಮ ಶಾಂತಿಯ ಶಕ್ತಿಯನ್ನು ಪ್ರತ್ಯಕ್ಷ ಮಾಡಿರಿ. ಒಂದೇ ಬಾರಿ ಮನಸ್ಸಿನಿಂದ, ತನುವಿನಿಂದ ಪ್ರತ್ಯಕ್ಷ ಮಾಡಿರಿ. (ಬಾಪ್‌ದಾದಾ ಪೂರ್ಣ ಶಾಂತಿಯ ವ್ಯಾಯಾಮ ಮಾಡಿಸಿದರು) ಒಳ್ಳೆಯದು.

**ನಾಲ್ಕು ಕಡೆ ಇರುವಂತಹ ಸರ್ವ ವಿಶೇಷ ಆತ್ಮರಿಗೆ, ಸದಾ ಆತ್ಮಿಕ ವ್ಯಕ್ತಿತ್ವದ ನಶೆಯಲ್ಲಿ ಇರುವವರಿಗೆ, ಸದಾ ಬೆಹದ್ ಸೇವೆಯಲ್ಲಿ ಸ್ವಯಂಅನ್ನು ನಿಮಿತ್ತವಾಗಿ ಮಾಡಿಕೊಳ್ಳುವ ವಿಶ್ವಕಲ್ಯಾಣಕಾರಿ ಆತ್ಮರಿಗೆ, ಸದಾ ಬ್ರಹ್ಮಬಾಬಾ ಮತ್ತು ಜಗದಂಬಾರವರ ಸ್ಲೋಗನನ್ನು  ಸಾಕಾರದಲ್ಲಿ ತರುವವರಿಗೆ, ಶ್ರೇಷ್ಠಾತಿ ಶ್ರೇಷ್ಠವಾದ ದೃಷ್ಟಿಯಿಂದ ಅದ್ಭುತ(ಪ್ರಸನ್ನ) ಮಾಡುವ ಸೇವೆಯನ್ನು ಮಾಡುವ ಬಾಪ್ ಸಮಾನ ಆತ್ಮರಿಗೆ, ಬಾಪ್‌ದಾದಾ ಮತ್ತು ಜಗದಂಬಾ ತಾಯಿಯ ಪ್ರಿಯ ಸ್ಮೃತಿಗಳು ಮತ್ತು ನಮಸ್ತೆ.**

ರಿವೈಸ್ ಕೋರ್ಸ್ 28-11-1997.

***ಬೇಹದ್ ಸೇವೆಯ ಸಾಧನೆ- ಆತ್ಮಿಕ ವ್ಯಕ್ತಿತ್ವದ ಮೂಲಕ ದೃಷ್ಟಿಯಿಂದ ನಿಹಾಲ್(ಅದ್ಭುತ,ತೃಪ್ತ) ಮಾಡಬೇಕು.***

ಆತ್ಮಿಕ ವ್ಯಕ್ತಿತ್ವ ಪ್ರತ್ಯಕ್ಷ ರೂಪದಲ್ಲಿ ಇದ್ದರೆ ಅವರ ನಯನಗಳು, ಅವರ ಮುಖ, ನಡವಳಿಕೆ, ಸಂಕಲ್ಪ ಮತ್ತು ಸಂಬಂಧ ಎಲ್ಲವೂ ಪ್ರಸನ್ನವಾಗಿ ಇರುತ್ತವೆ. ಸದಾ ಪ್ರಸನ್ನ ಚಿತ್ತರಾಗಿ ಇರುತ್ತಾರೆ. ಪ್ರಶ್ನಚಿತ್ತರಾಗಿ ಇರುವುದಿಲ್ಲ. ತಂದೆಯ ಮಹಿಮೆ "ದೃಷ್ಟಿಯಿಂದ ಅದ್ಭುತವನ್ನು(ಪ್ರಸನ್ನ,ತೃಪ್ತ)  ಮಾಡುವವರು" ಎಂದು. ಇದು ಕೇವಲ ತಂದೆಯದೇ ಅಲ್ಲ ಮಕ್ಕಳಾದ ನಿಮ್ಮ ಮಹಿಮೆಯೂ ಆಗಿದೆ. ಬ್ರಹ್ಮಾ ತಂದೆಯನ್ನು ನೋಡಿದಾಕ್ಷಣ ನೀವು ಯೋಚನೆ ಕೂಡ ಮಾಡದೇ ತಂದೆಯ ಮಕ್ಕಳಾಗಿಬಿಟ್ಟಿರಿ. ಬ್ರಹ್ಮಾ ತಂದೆಯಲ್ಲಿ ತಂದೆ ಇದ್ದ ಸಲುವಾಗಿ ಶ್ರಮ ಎನಿಸಲಿಲ್ಲ. ಹಾಗೆಯೇ ನೀವೆಲ್ಲರೂ ಕೂಡ ಬಾಪ್ ದಾದಾರವರನ್ನು ನಿಮ್ಮಲ್ಲಿ ಸಮಾವೇಶಗೊಳಿಸಿ ದೃಷ್ಟಿಯಿಂದ ಅದ್ಭುತವನ್ನು ಮಾಡಿರಿ. ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸ್ವಪ್ನ ಮತ್ತು ಸಂಕಲ್ಪದಲ್ಲಿ ಕೂಡ ಸಂಪೂರ್ಣ ಪವಿತ್ರತೆಯ ವ್ಯಕ್ತಿತ್ವದಿಂದ ಇದ್ದೇನೆ.

2. ಪವಿತ್ರತೆಯೊಂದಿಗೆ ನನ್ನ ಮುಖ ಮತ್ತು ನಡವಳಿಕೆಯಲ್ಲಿ ಆತ್ಮಿಕ ವ್ಯಕ್ತಿತ್ವದ ಖಜಾನೆಗಳಿಂದ ಸಂಪನ್ನವಾಗಿರುವ ವ್ಯಕ್ತಿತ್ವವಿದೆ.

3. ನಾನು ಶ್ರೇಷ್ಠಾತಿ ಶ್ರೇಷ್ಠವಾದ ಪರಮಾತ್ಮ ನನ್ನನ್ನು ಶ್ರೇಷ್ಠ ವ್ಯಕ್ತಿತ್ವವಿರುವಂತೆ ತಯಾರು ಮಾಡಿದ್ದಾರೆ. ಎಂಬ ಆತ್ಮಿಕ ನಶೆಯಲ್ಲಿ ಇದ್ದೇನೆ.

4. ನನ್ನ ವ್ಯಕ್ತಿತ್ವ ಸದಾ ಸ್ಮೃತಿಯಲ್ಲಿ ಪ್ರತ್ಯಕ್ಷವಾಗಿ ಇದೆ ಮತ್ತು ಕಾಣಿಸುತ್ತಿದೆ, ಅನುಭವದಲ್ಲಿ ಕೂಡ ಬರುತ್ತಿದೆ.

5. ನನ್ನ ಆತ್ಮಿಕ ವ್ಯಕ್ತಿತ್ವದಿಂದ ನನ್ನ ನಯನಗಳು, ಮುಖ, ನಡವಳಿಕೆ, ಸಂಕಲ್ಪಗಳು ಮತ್ತು ಸಂಬಂಧಗಳು ಎಲ್ಲವೂ ಪ್ರಸನ್ನವಾಗಿ ಇವೆ.

6. ನಾನು ಗೊಂದಲದಲ್ಲಿ, ಅಶಾಂತಿಯಿಂದ ಇರುವ ಆತ್ಮರನ್ನು ನನ್ನ ಪ್ರಸನ್ನತೆಯ ದೃಷ್ಟಿಯಿಂದ ಪ್ರಸನ್ನ ಮಾಡುವ ಸೇವೆಯನ್ನು ಮಾಡಿರುವ ಪ್ರಸನ್ನ ಚಿತ್ತ ಸ್ವರೂಪ.

7. ನಾನು ತಂದೆಯ ಸಮಾನವಾಗಿ ದೃಷ್ಟಿಯಿಂದ ಅದ್ಭುತ(ತೃಪ್ತ) ಮಾಡುವ ಸೇವೆಯನ್ನು ಮಾಡಿ ಅವರ ಮನಸ್ಸಿನಲ್ಲಿ ಇರುವ ಆಸೆಯನ್ನು ಪೂರ್ಣ ಮಾಡುತ್ತಿದ್ದೇನೆ.

8. ನಾನು ತಂದೆಯ ಸಮಾನವಾಗಿ ಒಂದೇ ಸ್ಥಾನದಲ್ಲಿರುತ್ತಲೂ ಮೈಟ್(ಶಕ್ತಿ)ಯಾಗಿ, ಶಕ್ತಿಯನ್ನು ಕೊಡುವ ಬೇಹದ್ ಸೇವೆಯನ್ನು ಮಾಡುವ ಬೇಹದ್ ಸೇವಾಧಾರಿಯಾಗಿದ್ದೇನೆ.

9. ನಾನು ಬೇಹದ್ ಸೇವೆಯಲ್ಲಿ ಬಿಜಿಯಾಗಿರುತ್ತಾ ಬೆಹದ್ ವೈರಾಗ್ಯವನ್ನು ಸ್ವತಹವಾಗಿ ಮನಸ್ಸಿನಿಂದ ಅನುಭವ ಮಾಡಿದ್ದೇನೆ.

10. ನಾನು ಬೇಹದ್‌ಆಗಿ ಶಕ್ತಿಯನ್ನು ಕೊಡುತ್ತಾ ಇದ್ದ ಕಾರಣ ನನ್ನ ಸಮೀಪವಿರುವವರು ಸ್ವತಹವಾಗಿ ಶಕ್ತಿಯನ್ನು ಪಡೆದರು ಮತ್ತು ವಾಯುಮಂಡಲವೂ ತಯಾರಾಯಿತು.

11. ನಾನು ಬಾಪ್‌ದಾದಾರವರನ್ನು ನನ್ನಲ್ಲಿ ಸಮಾವೇಶಗೊಳಿಸಿ ದೃಷ್ಟಿಯಿಂದ ಅದ್ಭುತವನ್ನು ಮಾಡುತ್ತಿದ್ದೇನೆ.

12. ನಾನು ಬ್ರಹ್ಮಾ ತಂದೆಯ ಸಮಾನವಾಗಿ ನನ್ನ ಮುಖದಲ್ಲಿ, ನಡವಳಿಕೆಯಲ್ಲಿ, ವ್ಯಕ್ತಿತ್ವವನ್ನು ತಯಾರು ಮಾಡಿಕೊಂಡು ಎಲ್ಲರನ್ನು ಆಕರ್ಷಣೆ ಮಾಡುವ ಆಕರ್ಷಣಾ ಮೂರ್ತಿ.

13. ನಾನು ಬೇಹದ್ ಸೇವೆಯಲ್ಲಿ ಸಮಯವನ್ನು ಉಪಯೋಗಿಸುವುದರಿಂದ ಸಮಸ್ಯೆಗಳು ಸ್ವತಹವಾಗಿ ತೊಲಗಿ ಹೋಗಿವೆ.

14. ನಾನು ಬಲಹೀನ ಆತ್ಮರಿಗೆ (ಅಜ್ಞಾನಿಯಾದರೂ, ಜ್ಞಾನಿಯಾದರೂ) ದಾತನಾಗಿ ಶಕ್ತಿ, ಗುಣದ ಸಹಯೋಗವನ್ನು ಕೊಟ್ಟು ಆಶೀರ್ವಾದಗಳನ್ನು ಪಡೆದಿದ್ದೇನೆ.

15. ನಾನು ಪುರುಷಾರ್ಥಕ್ಕೆ ಸಮಯವನ್ನು ಉಪಯೋಗಿಸುವ ಅವಶ್ಯಕತೆ ಇಲ್ಲದೆ ಆಶೀರ್ವಾದಗಳೆಂಬ ಲಿಫ್ಟಿಗಿಂತಲೂ ವೇಗವಾದ ರಾಕೆಟ್ ನಂತೆ ಹಾರುತ್ತಿದ್ದೇನೆ.

16. ನಾನು ಏಕೆ, ಏನು, ಹೇಗೆ ಎಂಬ ಭಾಷೆಯನ್ನು ಸಮಾಪ್ತಿ ಮಾಡಿ ಆಶೀರ್ವಾದಗಳನ್ನು ಕೊಡುತ್ತಿದ್ದೇನೆ ಮತ್ತು ಪಡೆಯುತ್ತಿದ್ದೇನೆ.

17. ಯಾರು ಹೇಗಿದ್ದರೂ ನನ್ನ ಹೃದಯದಿಂದ ಪ್ರತಿಯೊಂದು ಆತ್ಮನಿಗೆ ಕಲ್ಯಾಣವಾಗಬೇಕು, ಇವರ ಬುದ್ಧಿ ಕೂಡ ಶಾಂತಿಮಯವಾಗಬೇಕು. ಎಲ್ಲರೂ ಚೆನ್ನಾಗಿರಬೇಕು ಎಂಬ ಆಶೀರ್ವಾದಗಳನ್ನು ಕೊಡುತ್ತಿದ್ದೇನೆ.

18. ನಾನು ಬ್ರಹ್ಮಾ ತಂದೆಯ ಸ್ಲೋಗನ್ "ಯಾವ ಕರ್ಮವನ್ನು ನಾನು ಮಾಡುತ್ತೇನೆಯೋ ನನ್ನನ್ನು ನೋಡಿ ಎಲ್ಲರೂ ಮಾಡುತ್ತಾರೆ" ಮತ್ತು ಜಗದಂಬಾರವರ  ಸ್ಲೋಗನ್ "ಮಾಲಿಕನ ಆಜ್ಞೆ ನನ್ನನ್ನು ನಡೆಸುತ್ತಿದೆ, ನಾನು ನಿಮಿತ್ತವಾಗಿ ನಡೆಯುತ್ತಿದ್ದೇನೆ" ಎಂಬ ಈ ಎರಡು ಸೂಕ್ತಿಗಳನ್ನು ಕರ್ಮದಲ್ಲಿ ಮಾಡಿ ತೋರಿಸುತ್ತಿದ್ದೇನೆ.

19. ನಾನು ಗ್ಲಾನಿ (ನಿಂದೆ) ಮಾಡುವ ಆತ್ಮರಿಗೂ ಕೂಡ ಆಶೀರ್ವಾದಗಳನ್ನು ಕೊಡುತ್ತಿದ್ದೇನೆ.

20. ಇವರು ಹೀಗೆ, ಅವರು ಹಾಗೆ, ಇವರು ಬದಲಾಗುವುದಿಲ್ಲ ಎಂಬುದನ್ನು ಸಂಕಲ್ಪ ಮಾತ್ರ ಕೂಡ ಇರದೇ ನಾನು ಬದಲಾಗಬೇಕು ಎಂದುಕೊಳ್ಳುತ್ತಿದ್ದೇನೆ.

21. ಯಾರು ಏನೇ ಮಾಡಿದರೂ ನಾನು ಏನು ಮಾಡಬೇಕು, ಏನು ಯೋಚಿಸಬೇಕು, ಏನು ಹೇಳಬೇಕು ಎಂಬ ವಿಷಯದಲ್ಲಿ ಸೇವಾ ಭಾವನೆಯಿಂದ ನಾನು ಎಂಬ ಭಾವನೆಯನ್ನು ಇಟ್ಟು ಶ್ರೇಷ್ಠ ತರಂಗಗಳನ್ನು ವ್ಯಾಪಿಸುತ್ತಿದ್ದೇನೆ.

22. ನಾನು ನಿಂದೆಯನ್ನು ಮತ್ತು ಗೊಂದಲವನ್ನು ಸಹಿಸಿ ಸಮಾವೇಶಗೊಳಿಸಿಕೊಂಡು ನನ್ನ ರಾಜಧಾನಿಯನ್ನು ನಿಶ್ಚಿತ ಮಾಡಿಕೊಂಡಿದ್ದೇನೆ.

23. ನನ್ನ ಶಾಂತಿಯ ಶಕ್ತಿಯಿಂದ ಮನಸ್ಸಿನ ಶುಭ ಭಾವನೆಗಳು ಇತರಾತ್ಮರವರೆಗೆ ತಲುಪುತ್ತಿವೆ.

24. ನಾನು ಒಂದು ಕ್ಷಣದಲ್ಲಿ ನನ್ನ ಶಾಂತಿಯ ಶಕ್ತಿಯನ್ನು ಮನಸ್ಸಿನಿಂದ, ತನುವಿನಿಂದ ಪ್ರತ್ಯಕ್ಷ ಮಾಡಿದ್ದೇನೆ.